ಪ್ರಜಾವಾಣಿ

ಬುಧವಾರ
30ನೇ ಏಪ್ರಿಲ್ 2014

B 3

# ಏಟ್ರೀ ಸಂಸ್ಥೆಗೆ ₹ 19 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆ ನಿಯಂತ್ರಣ ಕುರಿತು ಸಂಶೋಧನೆ ಕೈಗೊಂಡಿರುವ 'ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಅಂಡ್ ಎನ್ವಿರಾನ್‌ಮೆಂಟ್' (ಏಟ್ರೀ) ಸಂಸ್ಥೆಗೆ 'ರಾಯಲ್ ನಾರ್ವೆಯನ್ ಎಂಬೆಸಿ' (ಆರ್‌ಎನ್‌ಇ) ₹ 14 ಕೋಟಿ ಮತ್ತು ರೋಹಿಣಿ ನಿಲೇಕಣಿ ಅವರಿಂದ ₹ 5 ಕೋಟಿ ಅನುದಾನ ಲಭಿಸಿದೆ.

ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆರ್‌ಎನ್‌ಇ ಮತ್ತು ಏಟ್ರೀ ನಡುವಿನ ಹವಾಮಾನ ಬದಲಾವಣೆ ನಿಯಂತ್ರಣ ಸಂಶೋಧನಾ ಯೋಜನೆಗೆ ನಾರ್ವೆಯ ಭಾರತದ ರಾಯಭಾರಿ ಈವಿಂಡ್ ಎಸ್ ಹೊಮೆ ಚಾಲನೆ ನೀಡಿದರು.